ಇ) ಸದರಿ ಕೆಲಸವನ್ನು 1987ರ ಜೂನ್‌ನಲ್ಲಿ ಪ್ರಾರಂಭಿಸಿ ವಿವಿಧ ಹಂತಗಳಲ್ಲಿ ಕೈಗೊಳ್ಳಲಾಗಿದೆ. ಹಾಗೂ ಇದುವರೆವಿಗೆ 496.00 ಲಕ್ಷ ರೂ. ವೆಚ್ಚವಾಗಿರುತ್ತದೆ.

ಈ) ಇಡೀ ಹೊರರಸ್ತೆ ನಿರ್ಮಾಣವನ್ನು ಬಿ.ಒ.ಟಿ. ಆಧಾರದ ಮೇಲೆ ಪ್ರಮಣಿಯ ಭಾರತ್ ಫೋರ್ಜ್ ಕಂಪನಿಯವರಿಗೆ ವಹಿಸಿಕೊಡಲು ಒಪ್ಪಿಗೆ ಪತ್ರವನ್ನು ಕೇಂದ್ರ ಸರ್ಕಾರವು ನೀಡಿರುತ್ತದೆ. ಅಂತಿಮ ಕರಾರನ್ನು ಇನ್ನೂ ಮಾಡಿಕೊಂಡಿರುವುದಿಲ್ಲ. ಹಾಗೂ ಕರಾರು ಆದ ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವ ಸಂಭವವಿದೆ.

ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕು ಸ್ಟೇಡಿಯಂ ಕಟ್ಟಡಗಳ ನಿರ್ಮಾಣ.

2332 - ಶ್ರೀ ಮಂಜೂನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಶಿಗ್ಗಾಂವ್ ತಾಲ್ಲೂಕು ಕ್ರೀಡಾಂಗಣ ಕಟ್ಟಡ ಕಟ್ಟಲು ಎಷ್ಟು ಹಣ ಖರ್ಚು ಮಾಡಲಾಗಿದೆ?

2) ಸದರಿ ಕೆಲಸ ಯಾವ ಹಂತದಲ್ಲಿದೆ? ಈ ನಿರ್ಮಾಣ ಕಾಮಗಾರಿಯನ್ನು ಬೇಗ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

3) ಸವಣೂರು ತಾಲ್ಲೂಕು ಕ್ರೀಡಾಂಗಣ ಕಟ್ಟಡ ಕಟ್ಟಲು ಎಷ್ಟು ಎಕರೆ ಜಮೀನು ತೆಗೆದುಕೊಳ್ಳಲಾಗಿದೆ?

4) ಸದರಿ ಕಾಮಗಾರಿಯನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡಲಾಗುವುದು?

5) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ನೆರವು ಪಡೆಯಲಾಗುವುದೇ?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಶಿಗ್ಗಾಂವ್ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಮಾಡಲು ರೂ. 5.038 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಕ್ರೀಡಾಂಗಣ ನಿರ್ಮಾಣ ಕಾರ್ಯ ಪ್ರಾರಂಭ ಮಾಡಲಾಗಿದ್ದು ಈವರೆಗೂ ಕ್ರೀಡಾಂಗಣದ ನೆಲಸಮತಟ್ಟು ಮಾಡಲಾಗಿರುತ್ತದೆ. ಮತ್ತು ಪ್ರೇಕ್ಷಕರ ಆಸನಕ್ಕಾಗಿ ಸುತ್ತಲೂ ಒಡ್ಡನ್ನು ನಿರ್ಮಾಣ ಮಾಡಿ ಪೂರ್ಣಗೊಳಿಸಲಾಗಿದೆ. 1997-98ನೇ ಸಾಲಿನಲ್ಲಿ ಕ್ರೀಡಾಂಗಣದ ಉಳಿದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

3) ಸವಣೂರು ತಾಲ್ಲೂಕು ಕ್ರೀಡಾಂಗಣ ಕಟ್ಟಡ ಕಟ್ಟಲು 8 ಎಕರೆ ಜಮೀನನ್ನು ಇಲಾಖೆಗೆ ಪಡೆಯಲಾಗಿದೆ.

4) 1997-98ನೇ ಸಾಲಿನಲ್ಲಿ ಕ್ರೀಡಾಂಗಣದ ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು.

5) ಈ ಯೋಜನೆಗೆ ಕೇಂದ್ರ ಸರ್ಕಾರದ ನೆರವು ಪಡೆಯಲಾಗುವುದು.